ಹೊಸ ಶಾಸಕರುಗಳು ಆಕ್ಷೇಪಣೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಕೂಡ ನಾವು ಸೂಚನೆ ಕಳುಹಿಸಿಕೊಟ್ಟಿದ್ದೇವೆ. ಅನರ್ಹ ಫಲಾನುಭವಿಗಳೇನಾದರೂ ಆ ಯಾದಿಯಲ್ಲಿದ್ದರೆ, ಆ ಅನರ್ಹ ಫಲಾನುಭವಿಗಳನ್ನು ನಾವು ವಿಚಾರಣೆ ಮಾಡಿ, ಅವರನ್ನು ತೆಗೆದು ಹಾಕಿ ಎನ್ನುವ ಮಾತನ್ನು ಹೇಳಿದ್ದೇವೆ. ತಾವು ಹೇಳಿದಂತೆ, ಈ ದಿವಸವೇ ನಾವು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್‌ನ ಮಾನ್ಯ ಎಂ.ಡಿ. ಶ್ರೀಶೈಲಂರವರ ಜೊತೆ ಮಾತನಾಡಿ ಆ ಗಡುವನ್ನು ವಿಸ್ತರಿಸುವ ಕೆಲಸ ಮಾಡುತ್ತೇವೆ. ರಿಜಿಸ್ಟ್ರೇಷನ್ ಆಗದಿದ್ದರೆ, ಕೆಲಸವಾಗುವುದಿಲ್ಲವೆನ್ನುವಂಥಾದ್ದಿದೆ. ನಾವು ಕೂಡಲೇ ನಮ್ಮ ಗುರಿಯನ್ನು ಮುಟ್ಟದಿದ್ದರೆ, ಹುಡ್ಕೋದಿಂದ ಬರುವ ಸಾಲ, ಕೇಂದ್ರ ಸರ್ಕಾರದಿಂದ ಬರುವ ಸಾಲಕ್ಕೂ ತೊಂದರೆಯಾಗುತ್ತದೆ. ತಾವು ಹೇಳಿದ ಮಾತಿಗೆ ನಾವು ಗುಡುವನ್ನು ವಿಸ್ತರಿಸಲಿಕ್ಕೆ ಅವರ ಜೊತೆ ಮಾತನಾಡುತ್ತೇವೆ.

ಜ) ವಿಷಯ : ಮೈಸೂರಿನಲ್ಲಿ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಎಂಬ ಸಂಸ್ಥೆ ಜಾಹೀರಾತು ನೀಡಿರುವ ಬಗ್ಗೆ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಇಲ್ಲಿ ಒಂದು ಅಡ್ವರ್‌ಟೈಸ್‌ಮೆಂಟ್ ನೋಡಿ ನಾನು ಇದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮೈಸೂರಿನ ದಳವಾಯಿ ಹೈಸ್ಕೂಲ್ ಕಟ್ಟಡದಲ್ಲಿ ನಡೆಯುತ್ತಿರುವ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಂಗ್ ಇವರದ್ದು ಒಂದು ಅಡ್ವರ್‌ಟೈಸೆಮೆಂಟ್ ಬಂದಿದೆ. ಇದರಲ್ಲಿ ಏನು ಹೇಳುತ್ತಾರೆಂದರೆ, ಇಂಜಿನಿಯರಿಂಗ್‌ಗೆ ಸಮಾನವಾದ ಕೋರ್ಸ್ ಎಂದು ಇವರು ಹೇಳುತ್ತಾರೆ. ಅದರಲ್ಲಿ Air Hostess Engineering, Marine Engineering, Electronic Engineering ಎಲ್ಲವನ್ನೂ ಕೊಟ್ಟು ಒಂದು ನೋಟ್ ಅನ್ನು ಕೊಡುತ್ತಾರೆ. ಫೀಸ್ ಎಲ್ಲಾ ಹಾಕಿ, The above Engineering courses are recognised by Government of India and all the state Governments as equivalent to B.E degree in Engineering. ಎಂದು ಹಾಕುತ್ತಾರೆ. ಇದರ ಸತ್ಯಾಸತ್ಯತೆ ಬಗ್ಗೆ ತಿಳಿದುಕೊಳ್ಳಬೇಕು. ಏಕೆಂದರೆ, ಮುಗ್ಧ ಮಕ್ಕಳು ಅಲ್ಲಿ ಹೋಗಿ ಫೀಸ್ ಕಟ್ಟಿ, ಕೆಲವು ದಿವಸ ಕೋರ್ಸಿಗೆ ಹೋಗಿ, ನಂತರ ಬೋಗಸ್ ಎಂದು ಆದರೆ ಅದರಿಂದ ದೊಡ್ಡ ಸಮಸ್ಯೆ ಉದ್ಭವವಾಗುತ್ತದೆ. ಅವರೇನು ಹೇಳುತ್ತಾರೆಂದರೆ, ಈ ಸಿ.ಇ.ಟಿ. ಪ್ರಾಬ್ಲಂ ಇದ್ದದ್ದರಿಂದ, ಇದನ್ನು ಪ್ರಾರಂಭ ಮಾಡಿದ್ದೇವೆ ಎಂದು ಹೇಳುತ್ತಾರೆ. ಅದಕ್ಕೋಸ್ಕರ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಗಮನಹರಿಸಬೇಕು. ಒಂದು ವೇಳೆ ರೆಕಗ್ನೈಸ್ಡ್ ಆದರೆ ನಾವು ಅದರ ಬಗ್ಗೆ ಆತಂಕ ಪಡುವುದಿಲ್ಲ. ಆದರೆ, ಅದು ರೆಕಗ್ನೈಸ್ಡ್ ಹೌದೋ, ಅಲ್ಲವೋ? ಒಂದು ವೇಳೆ Whether is is equivalent to B.E.? ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು, ಸುಳ್ಳಾದರೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇವೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಇದರ ಬಗ್ಗೆ ನಮಗೆ ಯಾವುದೇ ಖಚಿತವಾದ ದೂರು ಬಂದಿಲ್ಲ. ಅವರು ಅನ್-ರೆಕಗ್ನೈಸ್ಡ್ ಕಾಲೇಜು ಪ್ರಾರಂಭ ಮಾಡಿದ್ದರೆ, ಪೇರೆಂಟ್ಸ್ ಅನ್ನು ತಪ್ಪುದಾರಿಗೆ ಎಳೆದಿದ್ದರೆ ಎಳೆದಿದ್ದರೆ, ಅದಕ್ಕೆ ನಾವು ಜವಾಬ್ದಾರರಲ್ಲ. ನಮಗೆ ಇಲ್ಲಿಯವರೆಗೆ ಯಾವುದೇ ದೂರು ಬಂದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ತಾವು ಹಿರಿಯರಾಗಿ ಈ ರೀತಿ ಹೇಳಬಾರದು.

Sri K. Jayaprakash Hegde : They have advertised that Government of India has recognised it.

Sri K.R. Ramesh Kumar : He is misleading the public. You must immediately initiate action, get the information. ಅವರಿಗೆ ರೆಕಗ್ನಿಷನ್ ಇಲ್ಲದೇ, ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದರೆ, you must take criminal action against that fellow that fellow. Can the Government plead helplessness? ಎಲ್ಲಾದರೂ ಉಂಟೆ, You can't wait for a complaint from the parents. You should immediately suomoto start the action. Get the information telephonically from your officers whether that institution has the recognisition. ಅವರಿಗೆ ರೆಕಗ್ನಿಷನ್ ಇಲ್ಲವೆಂದರೆ, by this evening you must initiate criminal action against them.

ಶ್ರೀ ಡಿ. ಮಂಜುನಾಥ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರ ಸಲಹೆ ಪ್ರಕಾರ, ಇವತ್ತಿನ ದಿವಸ ತಕ್ಷಣ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ : ಅದಕ್ಕೆ ಪೂರಕವಾಗಿ ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಿದ ಮಾತಿಗೆ....

ಅಧ್ಯಕ್ಷರು : ಗಂಭೀರವಾದ ಸಮಸ್ಯೆಯನ್ನು ಮಾನ್ಯ ಹೆಗ್ಡೆಯವರು ಎತ್ತಿದ್ದಾರೆ. ಅನೇಕ, ಜನ, ಅನೇಕ ರೀತಿಯಲ್ಲಿ, ಈ ದೇಶದಲ್ಲಿ ಸರ್ಕಾರಗಳೇ ಇಲ್ಲವೆನ್ನುವ ರೀತಿಯಲ್ಲಿ ಸಂಘ-ಸಂಸ್ಥೆಗಳು..... ಇವೆಲ್ಲಾ ಮಾಡುತ್ತಿವೆ ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಅದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಹಿಂದೆ ವಿಧಾನ ಸೌಧ ಹಿನ್ನೆಲೆಯನ್ನಿಟ್ಟುಕೊಂಡು ಒಬ್ಬ ಮಹನೀಯ ತಾಂತ್ರಿಕ ವಿದ್ಯಾಲಯವನ್ನು ಮಾಡುತ್ತೇನೆ ಎಂಬ ಹೇಳಿಕೆ ಕೊಟ್ಟಿದ್ದಿತ್ತು. ಅದೇ ರೀತಿ, ವೈಟ್‌ಫೀಲ್ಡ್ ಹತ್ತಿರ ಡೇರಿ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರಾಯಶಃ ಕೃಷಿ ವಿಶ್ವವಿದ್ಯಾಲಯ ಬಿಟ್ಟರೆ ಬೇರೆ ಯಾರೂ ಪ್ರಾರಂಭ ಮಾಡಬಾರದೆಂದು ಇದ್ದಾಗಲೂ ಕೂಡ ಅದರಲ್ಲಿ ನಾನು ಶಿಕ್ಷಣವನ್ನು ಕೊಡುತ್ತೇನೆಂದು ಹೇಳಿ ಪ್ರಚಾರ ಮಾಡಿದ್ದಿತ್ತು. ಅವರ ಮೇಲೆ ಹಿಂದೆ ಕ್ರಮ ತೆಗೆದುಕೊಂಡಿದ್ದೇವೆ. ಈಗ ಸಿ.ಇ.ಟಿ ಗೊಂದಲವಿರುವುದರಿಂದ ಕೆಲವು ಜನ ಮುಗ್ಧ ಬಾಲಕರನ್ನು ದಾರಿ ತಪ್ಪಿಸುವ ರೀತಿಯಲ್ಲಿ ಶೋಷಣೆಗಳನ್ನು ಮಾಡಿರುತ್ತಾರೆ. ಇದಕ್ಕೆ ಪ್ರಾಉಶಃ ಯಾವ ವಿಶ್ವವಿದ್ಯಾಲಯವೂ ಕೂಡ ಮಾನ್ಯತೆ ಕೊಡಲಿಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ತತ್ಸಮಾನವಾದ ಎ.ಎಂ.ಐ.ಇ. ಎಂಬ ಕೋರ್ಸ್ ಇದೆ. ಅದು ಬಿ.ಇ.ಗೆ ತತ್ಸಮಾನವಾದದ್ದೆಂದು ಹೇಳಿ ಸರ್ಕಾರದ ಮಾನ್ಯತೆ ಪಡೆದಿರುವ ಕೋರ್ಸ್ ಬಿಟ್ಟರೆ, ಉಳಿದಿದ್ದು ಇಲ್ಲ. ಆ ಕಾರಣಕ್ಕಾಗಿ ತಾವು ಏನು ಹೇಳಿದ್ದೀರಿ ಅದಕ್ಕೆ ಉನ್ನತ ಶಿಕ್ಷಣ ಸಚಿವರು ಈ ದಿವಸವೇ ಅವರನ್ನು ಕರೆಸಿ ಮಾತನಾಡಿ, ಅವರು ಯಾರೇ ಆಗಿರಲಿ, ಮೋಸ ಮಾಡುವ ಈ ಜನರನ್ನು 420 ಎಂದೇ ನಾವು ಪರಿಭಾವಿಸುತ್ತೇವೆ. ಐ.ಪಿ.ಸಿ. ಕೆಳಗೇ ರಿಜಿಸ್ಟರ್ ಮಾಡುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ (ಚ) : ರೇಷ್ಮೆ ಧಾರಣೆ ಕುಸಿತದಿಂದ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ಆರ್. ಧ್ರುವನಾರಾಯಣ್ (ಸಂತೇಮಾರನಹಳ್ಳಿ) : ರೇಷ್ಮೆ ಕೃಷಿ ಇವತ್ತು ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ಮೊದಲನೇ ರಾಜ್ಯವಾಗಿದೆ. ಇವತ್ತು ವಿಷಾದದ ಸಂಗತಿ ಎಂದರೆ,